19/07/23 ಪ್ರಾತಃಮುರುಳಿ ಓಂಶಾಂತಿ ಬಾಪ್ದಾದಾ ಮಧುಬನ

"ಮಧುರ ಮಕ್ಕಳೇ- ನಿಮ್ಮ ಈ ಜನ್ಮವು ಬಹಳ ಅಮೂಲ್ಯವಾಗಿದೆ ಏಕೆಂದರೆ ಸ್ವಯಂ ತಂದೆಯು ಈ ಸಮಯದಲ್ಲಿ ನಿಮ್ಮ ಸೇವೆ ಮಾಡುತ್ತಾರೆ, ಲಕ್ಷ್ಯವೆಂಬ ಸೋಪಿನಿಂದ ನಿಮ್ಮ ಆತ್ಮರೂಪಿ ವಸ್ತ್ರವನ್ನು ಸ್ವಚ್ಛ ಮಾಡುತ್ತಾರೆ"

ಪ್ರಶ್ನೆ: ಯಾರು ಅಲ್ಲಾನನ್ನು ಸೃಷ್ಟಿಯ ರಚಯಿತನೆಂದು ಹೇಳುತ್ತಾರೆ ಅವರೊಂದಿಗೆ ಯಾವ ಯನ್ನು ಕೇಳಬೇಕು?

ಉತ್ತರ: ಅವರನ್ನು ಕೇಳಿ- ಯಾವಾಗ ಅಲ್ಲಾರವರು ಸೃಷ್ಟಿಯನ್ನು ರಚಿಸಿದರೆಂದರೆ ರಚನೆಗಾಗಿ ಅವರಿಗೆ ಸ್ತ್ರೀ ಬೇಕು, ಅಂದಾಗ ಅಲ್ಲಾನ ಸ್ತ್ರೀ ಯಾರು? ಪರಮಪಿತನೆಂದು ಹೇಳುತ್ತೀರೆಂದರೆ ಅವಶ್ಯವಾಗಿ ತಾಯಿಯೂ ಬೇಕಲ್ಲವೆ. ನೀವು ಮಕ್ಕಳು ಈ ಗುಹ್ಯರಹಸ್ಯವನ್ನು ಚೆನ್ನಾಗಿ ಅರಿತುಕೊಂಡಿದ್ದೀರಿ. ಅಲ್ಲಾ (ಪರಮಾತ್ಮ)ನ ಸ್ತ್ರೀ ಈ ಬ್ರಹ್ಮಾ ಆಗಿದ್ದಾರೆ. ಇವರು (ಬ್ರಹ್ಮ) ನಿಮ್ಮ ದೊಡ್ಡತಾಯಿಯಾಗಿದ್ದಾರೆ. ಈ ಮಾತನ್ನು ಮನುಷ್ಯರು ಅರಿತುಕೊಳ್ಳುವುದಿಲ್ಲ.

ಗೀತೆ: ಈ ಎಲ್ಲಾ ಆಟವನ್ನು ರಚಿಸಿದವರು ಯಾರು................

ಓಂ ಶಾಂತಿ. ಮಕ್ಕಳಿಗೆ ಗೊತ್ತಿದೆ- ಯಾವುದೇ ಮನುಷ್ಯರು ಈ ಗೀತೆಯ ಯಥಾರ್ಥ ಅರ್ಥವನ್ನು ತಿಳಿಯಲು ಸಾಧ್ಯವಿಲ್ಲ. ನಾಟಕವನ್ನು ರಚಿಸುವವರೂ ಸಹ ತಿಳಿದುಕೊಂಡಿಲ್ಲ. ಹೇಗೆ ಶಾಸ್ತ್ರಗಳನ್ನು ಮಾಡಿಬಿಡುತ್ತಾರೆಯೋ ಹಾಗೆಯೇ ಗೀತೆಗಳನ್ನು ರಚಿಸಿಬಿಡುತ್ತಾರೆ. ಏನನ್ನೂ ಅರಿತುಕೊಳ್ಳುವುದಿಲ್ಲ. ನೀವು ವೇದಗಳಿಗಾಗಿ ಹೇಳುತ್ತೀರಿ- ಇವು ಧರ್ಮಶಾಸ್ತ್ರಗಳಲ್ಲ. ಶಾಸ್ತ್ರಗಳೆಂದು ಹೇಳುತ್ತಾರೆ ಆದರೆ ಧರ್ಮಶಾಸ್ತ್ರಗಳಲ್ಲ. ಧರ್ಮಶಾಸ್ತ್ರಗಳಿಂದಂತೂ ಏನಾದರೂ ಲಾಭವಾಗಬೇಕು. ಧರ್ಮಶಾಸ್ತ್ರದ ಅರ್ಥವನ್ನೂ ಸಹ ಮನುಷ್ಯರು ತಿಳಿದುಕೊಂಡಿಲ್ಲ. ಶಾಸ್ತ್ರ ಎಂದರೆ ಯಾವುದರಿಂದ ಯಾರ ಮುಖಾಂತರವಾದರೂ ಧರ್ಮ ಸ್ಥಾಪನೆಯಾಗುತ್ತದೆ ಅಂದಾಗ ಕೇಳಬೇಕು- ವೇದ, ಉಪನಿಷತ್ತುಗಳು ಯಾವ ಧರ್ಮಶಾಸ್ತ್ರಗಳಾಗಿವೆ? ಆ ಧರ್ಮವನ್ನು ಯಾರು ಸ್ಥಾಪನೆ ಮಾಡಿದರು? ಇದರಿಂದಂತೂ ಯಾವುದೇ ಧರ್ಮಸ್ಥಾಪನೆಯಾಗುವುದಿಲ್ಲ. ಯಾವ-ಯಾವ ಧರ್ಮಗಳಿವೆಯೆಂದು ತಿಳಿಸಲಾಗಿದೆ. ಹೇಗೆ ವೃಕ್ಷದಲ್ಲಿ ಕಾಂಡವು ಮುಖ್ಯವಾಗಿದೆ. ಅದರಿಂದ ದೊಡ್ಡ ಕೊಂಬೆಗಳು ನಂತರ ಚಿಕ್ಕ-ಚಿಕ್ಕ ರೆಂಬೆ-ಕೊಂಬೆಗಳು ಬರುತ್ತವೆ ಅಂದಾಗ ಮಕ್ಕಳಿಗೆ ತಿಳಿಸಲಾಗುತ್ತದೆ- ಈ ಯಾವ ಧರ್ಮಶಾಸ್ತ್ರ ಸರ್ವಶಾಸ್ತ್ರಮಯಿ ಶಿರೋಮಣಿ ಗೀತೆಯಾಗಿದೆ, ಅದು ಕಾಂಡವಾಗಿದೆ. ಅದರ ನಂತರ ಉಳಿದೆಲ್ಲವೂ ರಚನೆಯಾಯಿತು. ಈ ಇಸ್ಲಾಮಿ, ಬೌದ್ಧಿ, ಕ್ರಿಶ್ಚಿಯನ್, ಇತ್ಯಾದಿಗಳೆಲ್ಲವೂ ಕಲ್ಪವೃಕ್ಷದ ರೆಂಬೆ-ಕೊಂಬೆಗಳಾಗಿವೆ. ಇದು ಮನುಷ್ಯ ಸೃಷ್ಟಿಯ ವೃಕ್ಷವಾಗಿದೆ ಎಂದು ಗೀತೆಯಲ್ಲಿಯೂ ಬರೆಯಲ್ಪಟ್ಟಿದೆ ಅಂದಾಗ ಈ ವೃಕ್ಷದ ರಹಸ್ಯವೂ ಸಹ ಈಗ ಬುದ್ಧಿಯಲ್ಲಿ ಕುಳಿತಿದೆ. ಇದರ ಮುಖ್ಯಕಾಂಡವು ಆದಿ ಸನಾತನ ದೇವಿ-ದೇವತಾ ಧರ್ಮವಾಗಿದೆ. ಈ ವೃಕ್ಷವನ್ನು ಆಲದ ಮರಕ್ಕೆ ಹೋಲಿಸಲಾಗುತ್ತದೆ. ಅದು ಬಹಳ ದೊಡ್ಡದಾಗುತ್ತದೆ. ಯಾವಾಗ ಆ ವೃಕ್ಷವು ಹಳೆಯದಾಗುತ್ತದೆಯೋ ಆಗ ಅದರ ಕಾಂಡವು ಮುಚ್ಚಿಹೋಗುತ್ತದೆ. ಕೇವಲ ರೆಂಬೆ-ಕೊಂಬೆಗಳಿರುತ್ತವೆ. ಇದೂ ಸಹ ಹಾಗೆಯೇ ಆಗಿದೆ. ಮಕ್ಕಳಿಗೆ ಗೊತ್ತಿದೆ- ಇದರ ಕಾಂಡ ಯಾವ ದೇವಿ-ದೇವತಾ ಧರ್ಮವಾಗಿತ್ತು ಅದು ಈಗಿಲ್ಲ. ಪರಮಾತ್ಮನು 84 ಅವತಾರಗಳನ್ನು ಪಡೆಯುತ್ತಾರೆಂದರೆ ಅವರು ಸರ್ವವ್ಯಾಪಿಯಾಗಲು ಸಾಧ್ಯವಿಲ್ಲ. ಯಾವಾಗ ಅವತಾರವನ್ನು ತೆಗೆದುಕೊಳ್ಳುತ್ತಾರೆಂದರೆ ಅವರನ್ನು ಸರ್ವವ್ಯಾಪಿ ಎಂದು ಹೇಗೆ ಹೇಳುತ್ತೀರಿ? ಹೊಸ ಮಾತಾಗಿದೆಯಲ್ಲವೆ. ಇದು ಎಷ್ಟೊಂದು ದೊಡ್ಡವೃಕ್ಷವಾಗಿದೆ! ಕಾಂಡವು ಇಲ್ಲವೇ ಇಲ್ಲ. ಒಬ್ಬ ಮನುಷ್ಯನೂ ಸಹ ನಾವು ಆದಿಸನಾತನ ದೇವಿ-ದೇವತಾಧರ್ಮದವರೆಂದು ಹೇಳುವುದಿಲ್ಲ.

ಸತ್ಯಯುಗವನ್ನು ಲಕ್ಷಾಂತರ ವರ್ಷಗಳ ಹಿಂದೆ ತೆಗೆದುಕೊಂಡು ಹೋಗುತ್ತಾರೆ ಅಂದಾಗ ಇದು ಎಷ್ಟು ಗೊಂದಲದ ಮಾತಾಗಿದೆಯಲ್ಲವೆ. ಈಗ ಎಲ್ಲಾ ಮನುಷ್ಯರು ದುಃಖಿಯೇ ದುಃಖಿಯಾಗಿದ್ದಾರೆ. ಯಾರು ಸುಖಿಯಾಗಿರಲು ಸಾಧ್ಯ? ಸನ್ಯಾಸಿಗಳ ಬುದ್ಧಿಯಲ್ಲಿಯೂ ಸಹ ಈ ಹೋಲಿಕೆಯು ಬರುವುದಿಲ್ಲ- ಇಲ್ಲಿ ಕಾಗವಿಷ್ಟ ಸಮಾನ ಸುಖವಿದೆ ಮತ್ತು ಅಪಾರ ದುಃಖವಿದೆ. ಇದು ಅವರಿಗೆ ಗೊತ್ತೇ ಇಲ್ಲ. ಈಗ ತಂದೆಯು ತಿಳಿಸುತ್ತಾರೆ- ನಿಮ್ಮನ್ನು ಅಪಾರ ಸುಖದಲ್ಲಿ ಕರೆದುಕೊಂಡು ಹೋಗುತ್ತೇನೆ. ಈ ಸಮಯದಲ್ಲಿ ತಮ್ಮ ಪಾತ್ರವನ್ನಭಿನಯಿಸಿ ಎಲ್ಲವನ್ನೂ ಮಕ್ಕಳಿಗೆ ಕೊಟ್ಟು ತಾವು ಮರೆಯಾಗುತ್ತಾರೆ. ಹಾಗೆ ನೋಡಿದರೆ ಪಾತ್ರವನ್ನಂತೂ ಎಲ್ಲರೂ ಅಭಿನಯಿಸುತ್ತಾರೆ. ಇಸ್ಲಾಮಿ, ಬೌದ್ಧಿ ಮುಂತಾದವರೆಲ್ಲರೂ ಮರೆಯುತ್ತಾರೆ, ಮೇಲೆ ಹೋಗಿಬಿಡುತ್ತಾರೆ ಇದೂ ಸಹ ಯಾರಿಗೂ ಗೊತ್ತಿಲ್ಲ. ಮನುಷ್ಯರಿಗೆ ತಿಳಿಸಲಾಗುತ್ತದೆ- ಪ್ರಾಣಿಗಳಿಗಂತೂ ತಿಳಿಸುವುದಿಲ್ಲ. ಮನುಷ್ಯರ ಜನ್ಮವು ಎಲ್ಲದಕ್ಕಿಂತ ಶ್ರೇಷ್ಠವೆಂದು ಹೇಳಲಾಗುತ್ತದೆ. ಅದು ಯಾವುದು? ಮನುಷ್ಯನ ಚರ್ಮವೂ ಸಹ ಕೆಲಸಕ್ಕೆ ಬರುವುದಿಲ್ಲವೆಂದು ಹೇಳುತ್ತಾರೆ ನಂತರ ಮನುಷ್ಯಜನ್ಮವು ಉತ್ತಮವೆಂದು ಹೇಳುತ್ತಾರೆ ಪ್ರಪಂಚದ ಮನುಷ್ಯರ ಜೀವನವು ಬಹಳ ಕನಿಷ್ಟವಾಗಿದೆ. ನಿಮಗೆ ಗೊತ್ತಿದೆ- ನಾವೂ ಸಹ ಮೊದಲು ಛೀ ಛೀ ಕೊಳಕು ಮನುಷ್ಯರಾಗಿದ್ದೆವು, ಈಗ ತಂದೆಯು ನಮ್ಮ ಈ ಆತ್ಮರೂಪಿ ವಸ್ತ್ರವನ್ನು ಜ್ಞಾನದ ಲಕ್ಷ್ಯ ಸೋಪಿನಿಂದ ಸ್ವಚ್ಛ ಮಾಡುತ್ತಾರೆ ಮತ್ತು ತಿಳಿಸುತ್ತಾರೆ- ಈಗ ನಿಮ್ಮ ತಂದೆಯನ್ನು ನೆನಪು ಮಾಡಿ.

ಈ ಪ್ರಪಂಚದಲ್ಲಿ ತಂದೆಯನ್ನು ಯಾರೂ ಅರಿತುಕೊಂಡಿಲ್ಲ. ತಂದೆಯನ್ನು ಯಾವಾಗ ಅರಿತುಕೊಂಡಿರಿ ಆಗಲೇ ಮಕ್ಕಳಾದಿರಿ.

ಶಿವನ ಮಕ್ಕಳಾದಿರಿ, ಬ್ರಹ್ಮಾರವರಿಗೂ ಮಕ್ಕಳಾದಿರಿ ಆದ್ದರಿಂದ ಶಿವನ ಮೊಮ್ಮಕ್ಕಳೆಂದು ಕರೆಸಿಕೊಂಡಿರಿ. ಬ್ರಾಹ್ಮಣರೂ ಸಹ ಎರಡು ಪ್ರಕಾರದವರಿದ್ದೀರಿ, ಒಬ್ಬರು ಮುಖವಂಶಾವಳಿ ಬ್ರಾಹ್ಮಣರು, ಎರಡನೆಯವರು ಕುಖವಂಶಾವಳಿ. ನೀವು ಬ್ರಹ್ಮಾ ಮುಖವಂಶಾವಳಿ ಬ್ರಹ್ಮಾಕುಮಾರ-ಕುಮಾರಿಯರಾಗಿದ್ದೀರಿ. ಬ್ರಹ್ಮಾರವರ ತಂದೆ ಯಾರು? ಶಿವತಂದೆ. ಅವರ ತಂದೆಯಂತೂ ಯಾರೂ ಇಲ್ಲ. ನಿಮಗೆ ಓದಿಸುವವರೂ ಸಹ ಅವರಾಗಿದ್ದಾರೆ. ನಿಮ್ಮ ಗುರುವೂ ಸಹ ಅವರೇ ಆಗಿದ್ದಾರೆ. ಈಗ ಸಮ್ಮುಖದಲ್ಲಿ ಕುಳಿತಿದ್ದಾರೆ ನಂತರ ಅದೃಶ್ಯವಾಗಿಬಿಡುತ್ತಾರೆ. ಪತಿತ ಪ್ರಪಂಚವನ್ನು ಪಾವನ ಮಾಡಿ, ದೇವಿ-ದೇವತಾ ಧರ್ಮವನ್ನು ಸ್ಥಾಪನೆ ಮಾಡಿ ಮತ್ತೆ ಎಲ್ಲರನ್ನೂ ಮುಕ್ತಿಧಾಮಕ್ಕೆ ಕರೆದುಕೊಂಡು ಹೋಗುತ್ತಾರೆ, 21 ಜನ್ಮಗಳ ಸುಖವನ್ನು ಕೊಟ್ಟುಬಿಟ್ಟರೆಂದರೆ ಇನ್ನೇನು ಬೇಕು! ತಂದೆಯು ಸದಾ ಸುಖಿಯನ್ನಾಗಿ ಮಾಡುತ್ತಾರೆ ಆದರೆ ಶ್ರೇಷ್ಠಪದವಿಗಾಗಿ ಪುರುಷಾರ್ಥವಂತೂ ಮಾಡಬೇಕು.

ಕೃಷ್ಣಪುರಿಯನ್ನು ಸುಖಧಾಮವೆಂದು ಕರೆಯಲಾಗುತ್ತದೆ. ನಾರಾಯಣನ ಬಾಲ್ಯವನ್ನು ತೋರಿಸುವುದಿಲ್ಲ. ಕೃಷ್ಣನ ಸ್ವಯಂವರವನ್ನು ತೋರಿಸುತ್ತಾರೆ. ಒಂದುವೇಳೆ ರಾಧೆಯೊಂದಿಗೆ ಸ್ವಯಂವರವಾಯಿತೆಂದರೆ ನಂತರ ಅವರ ಹೆಸರು ಏನು ಬದಲಾಯಿತು ಅದನ್ನು ತೋರಿಸುವುದಿಲ್ಲ. ಲಕ್ಷ್ಮೀ-ನಾರಾಯಣರ ಬಗ್ಗೆ ಮನುಷ್ಯರಿಗೆ ಗೊತ್ತಿಲ್ಲ. ಅವರ ಜೀವನ ಚರಿತ್ರೆಯನ್ನು ಯಾರೂ ತಿಳಿದುಕೊಂಡಿಲ್ಲ. ನೀವೀಗ ತಿಳಿದುಕೊಳ್ಳುತ್ತಿದ್ದೀರಿ. ಪೂರ್ಣ ಚಕ್ರವನ್ನು ಸುತ್ತಿರುವವರು ಕೋಟಿಯಲ್ಲಿ ಕೆಲವರೇ ಬರುತ್ತಾರೆ. ನೀವು ಅದನ್ನು ತಿಳಿದುಕೊಂಡಿದ್ದೀರಿ- ಯಾರು ಮೊದಲು ಪೂಜ್ಯರಿಂದ ಪೂಜಾರಿಯಾಗುತ್ತಾರೆಯೋ ಅವರೇ ಭಕ್ತಿ ಮಾಡುತ್ತಾರೆ. ಭಕ್ತರಂತೂ ಎಲ್ಲರೂ ಆಗಿದ್ದಾರೆ. ಮನುಷ್ಯರ ಜನಸಂಖ್ಯೆಯು ಸಾಸಿವೆಯ ಸಮಾನವಿದೆ. ಈಗ ಎಲ್ಲಾ ಮನುಷ್ಯರು ಮೃತ್ಯುವಿನ ದಡದಲ್ಲಿದ್ದಾರೆ. ಈಗ ನೀವು ಮಕ್ಕಳಿಗೆ ತುಂಬಾ ಒಳ್ಳೆಯ ಬುದ್ಧಿ ಸಿಕ್ಕಿದೆ. 84 ಜನ್ಮಗಳ ಚಕ್ರವು ಬುದ್ಧಿಯಲ್ಲಿ ಇಟ್ಟುಕೊಳ್ಳುವುದು ಸಹಜವಾಗಿದೆ. ನಾವೀಗ ಬ್ರಾಹ್ಮಣರಾಗಿದ್ದೇವೆ, ನಾವೇ ನಂತರ ದೇವತೆಗಳಾಗುತ್ತೇವೆ, ನಾವೇ 84 ಜನ್ಮಗಳನ್ನು ತೆಗೆದುಕೊಳ್ಳುತ್ತೇವೆ. ನಾನೇ ಅದು ಅದೇ ನಾನು- ಇದರ ಅರ್ಥವನ್ನು ಮಕ್ಕಳಿಗೆ ತಿಳಿಸಲಾಗಿದೆ, ಇದನ್ನು ಇಲ್ಲಿಯೇ ಹಾಡುತ್ತಾರೆ. ಅನ್ಯಧರ್ಮಗಳಲ್ಲಿ ಈ ಶಬ್ಧವು ಇಲ್ಲ. ಓಂ ಎಂದರೆ ಮನುಷ್ಯರು ಭಗವಂತನೆಂದು ತಿಳಿಯುತ್ತಾರೆ. ವಾಸ್ತವದಲ್ಲಿ ಓಂ ಎಂದರೆ ಆತ್ಮ. ಅವರು ಆತ್ಮವೇ ಪರಮಾತ್ಮನೆಂದು ಉಲ್ಟಾ ಹೇಳಿಬಿಡುತ್ತಾರೆ ನಂತರ ಮತ್ತೇನು? ನಾವು ಶರೀರವಂತೂ ಅಲ್ಲ, ನಾನು ಆತ್ಮ, ಇದು ನನ್ನ ಶರೀರವೆಂದು ಪರಮಪಿತ ಪರಮಾತ್ಮನಂತೂ ಹೇಳಲು ಸಾಧ್ಯವಿಲ್ಲ. ತಂದೆಯು ತಿಳಿಸುತ್ತಾರೆ- ನಾನಾತ್ಮನಂತೂ ಸರಿ ಆದರೆ ನಾನು ಈ ಶರೀರವಂತೂ ಬಾಡಿಗೆಯ ರೂಪದಲ್ಲಿ ಪಡೆದಿದ್ದೇನೆ. ಇವರು ನನ್ನ ಪಾದರಕ್ಷೆಯಲ್ಲ ಏಕೆಂದರೆ ನನಗೆ ಕಾಲುಗಳೇ ಇಲ್ಲ. ನನ್ನ ಚರಣದ ಪೂಜೆಯಾಗಲು ಸಾಧ್ಯವಿಲ್ಲ. ಕೃಷ್ಣನಿಗೆ ಚರಣಗಳಿವೆ, ನನಗಂತೂ ಇಲ್ಲ. ನಾನು ನಿರಾಕಾರಿಯಾಗಿದ್ದೇನೆ, ಹಾಗೆ ನೋಡಿದರೆ ನೀವಾತ್ಮರು ನಿರಾಕಾರಿಯೇ ಆದರೆ ನೀವು 84 ಜನ್ಮಗಳಲ್ಲಿ ಬರುತ್ತೀರಿ. ನನಗಂತೂ ಶರೀರವಿಲ್ಲ. ನಾನಂತೂ ಅಶರೀರಿಯಾಗಿದ್ದೇನೆ ಅಂದಾಗ ಅಶರೀರಿಯಾಗಿ ನನ್ನನ್ನು ನೆನಪು ಮಾಡಿ ಎಂದು ನಿಮಗೂ ಸಹ ತಿಳಿಸುತ್ತೇನೆ. ನಿಮಗೆ ಗೊತ್ತಿದೆ- ತಂದೆಯು ಬಂದಿದ್ದಾರೆ, ಅವರ ಪಾತ್ರವೇನು? ಪತಿತ ಸೃಷ್ಟಿಯನ್ನು ಪಾವನ ಮಾಡುವುದು. ನಿರಾಕಾರನಂತೂ ಅವಶ್ಯವಾಗಿ ಯಾವುದೋ ಶರೀರದಲ್ಲಿ ಬಂದಿರಬೇಕು. ಇದು ಮನುಷ್ಯರಿಗೆ ಗೊತ್ತಿಲ್ಲದೇ ಇರುವ ಕಾರಣ ಅವರು ಮೊದಲ ರಾಜಕುಮಾರ ಶ್ರೀಕೃಷ್ಣನ ಹೆಸರನ್ನು ಬರೆದುಬಿಟ್ಟಿದ್ದಾರೆ. ಈಗ ಶ್ರೀಕೃಷ್ಣನು ಇಲ್ಲಿ ಬರಲು ಹೇಗೆ ಸಾಧ್ಯ? ಇದನ್ನು ತಿಳಿದುಕೊಂಡು ಅನ್ಯರಿಗೆ ತಿಳಿಸಬೇಕಾಗಿದೆ.

ಠಾಗೂರ್ ಮುಂತಾದವರು ಗೀತೆಯನ್ನು ಎಷ್ಟೊಂದು ಮಹಿಮೆ ಮಾಡುತ್ತಿದ್ದರು. ವಾಸ್ತವದಲ್ಲಿ ಈ ಗೀತೆಯು ಕೃಷ್ಣನದಲ್ಲ. ಕೃಷ್ಣನನ್ನೂ ಸಹ ಈ ರೀತಿ ಮಾಡುವವರು ಶಿವತಂದೆಯಾಗಿದ್ದಾರೆ. ಇದು ಕೃಷ್ಣನ ಬಹಳ ಜನ್ಮಗಳ ಅಂತಿಮ ಜನ್ಮವಾಗಿದೆ. ತಂದೆಯು ತಿಳಿಸುತ್ತಾರೆ- ನಾನು ಚಿಕ್ಕಮಗುವಿನ ಶರೀರದಲ್ಲಿ ಕುಳಿತು ಹೇಗೆ ತಿಳಿಸುವುದು? ಅವಶ್ಯವಾಗಿ ಅನುಭವೀ ರಥವು ಬೇಕು. ನಾಟಕದನುಸಾರ ನನಗೆ ಈ ರಥವು ನಿಶ್ಚಿತವಾಗಿದೆ. ಇನ್ನೊಂದು ಕಲ್ಪದಲ್ಲಿ ಇನ್ನೊಂದು ರಥವನ್ನು ಪಡೆಯುತ್ತೇನೆಂದಲ್ಲ. ಬ್ರಹ್ಮಾರವರ ಮುಖಾಂತರವೇ ಸ್ಥಾಪನೆ ಮಾಡುತ್ತೇನೆ. ಕಲ್ಪದ ಹಿಂದೆಯೂ ಸಹ ನೀವು ಬ್ರಹ್ಮಾಕುಮಾರ-ಕುಮಾರಿಯರು ಬ್ರಹ್ಮಾರವರ ಮುಖಾಂತರ ಆಸ್ತಿಯನ್ನು ಪಡೆದಿದ್ದಿರಿ. ಈಗ ಮತ್ತೆಲ್ಲಾ ಸಂಗಗಳನ್ನು ಬಿಟ್ಟು ನನ್ನ ಸಂಗವನ್ನು ಜೋಡಿಸಿ. ನನ್ನವರಂತೂ ಒಬ್ಬ ಶಿವತಂದೆಯ ಹೊರತು ಬೇರೆ ಯಾರೂ ಇಲ್ಲ. ನೀವು ಮಾತಾಪಿತಾ, ನಾನು ನಿಮ್ಮ ಬಾಲಕ.... ಯಾರ ಮಹಿಮೆ ಇಷ್ಟೊಂದು ಇದೆಯೋ ಅವರ ಸಮ್ಮುಖದಲ್ಲಿ ನೀವೀಗ ಕುಳಿತಿದ್ದೀರಿ. ವಿಚಾರ ಮಾಡಬೇಕು- ಅವಶ್ಯವಾಗಿ ನಮ್ಮನ್ನು ಯಾರು ರಚಿಸಿದರು? ಅಲ್ಲಾ ರಚಿಸಿದರೆಂದು ಹೇಳುತ್ತಾರೆ ಅಂದಮೇಲೆ ಅವಶ್ಯವಾಗಿ ಅಲ್ಲಾನಿಗೆ ಯಾರಾದರೂ ಸ್ತ್ರೀಯೂ ಇರಬೇಕಲ್ಲವೆ? ಅಲ್ಲಾ ನಿರಾಕಾರನಾಗಿದ್ದಾರೆ, ಅವರಿಗೆ ಸ್ತ್ರೀ ಎಲ್ಲಿಂದ ಬಂದರು? ನೀವು ಪರಮಪಿತ ಪರಮಾತ್ಮನೆಂದು ಹೇಳುತ್ತೀರೆಂದರೆ ಪಿತ ಯಾವಾಗಲೂ ರಚಯಿತನಾಗುತ್ತಾರೆ. ತಾಯಿಯೇ ಇಲ್ಲದಿದ್ದರೆ ಅವರನ್ನು ತಂದೆಯೆಂದು ಹೇಗೆ ಹೇಳುತ್ತೀರಿ? ಮಕ್ಕಳು ಅವರಿಂದ ಜನ್ಮ ಪಡೆದಾಗಲೇ ತಂದೆಯೆಂದು ಹೇಳುತ್ತಾರಲ್ಲವೆ. ಪರಮಾತ್ಮನ ಸ್ತ್ರೀ ಯಾರು ಎಂಬುದು ಯಾರಿಗೂ ಸಹ ಗೊತ್ತಿಲ್ಲ ಇವು ಎಲ್ಲದಕ್ಕಿಂತ ಗುಹ್ಯಮಾತಾಗಿದೆ. ಆದಂ ಮತ್ತು ಬೀಬಿ ಇಬ್ಬರೂ ಇದ್ದಾರೆ. ಆದಂ ಎಂದು ಇವರಿಗೆ ಹೇಳಿದರೆ ಸರಸ್ವತಿಗೆ ಬೀಬಿ ಎಂದು ಹೇಳಲು ಸಾಧ್ಯವಿಲ್ಲ ಏಕೆಂದರೆ ಅವರು ಬೀಬಿಯಾಗಿಬಿಟ್ಟರೆ ನಂತರ ಅವರ ತಾಯಿ ಯಾರು? ಇವು ತಿಳಿದುಕೊಳ್ಳುವ ಮಾತುಗಳಾಗಿವೆ. ತಂದೆಯೇ ಕುಳಿತು ತಿಳಿಸುತ್ತಾರೆ. ಈ ಲೆಕ್ಕದಿಂದ ಈ ಬ್ರಹ್ಮಾ ನನ್ನ ಪ್ರಿಯತಮೆಯಾದರು. ಇವರ ಮುಖದ ಮುಖಾಂತರ ನೀವು ಮಕ್ಕಳನ್ನು ರಚಿಸುತ್ತೇನೆ. ಬ್ರಹ್ಮಾರವರ ಶರೀರದಲ್ಲಿ ಪ್ರವೇಶ

ಮಾಡುತ್ತೇನೆ. ಅವರನ್ನು ಸಂಭಾಲನೆ ಮಾಡಲು ಈ ಜಗದಂಬಾ ನಿಮಿತ್ತರಾದರು. ಆದಿದೇವ ಬ್ರಹ್ಮಾ ಮತ್ತು ಜಗದಂಬಾ ಸರಸ್ವತಿ ಇವರು ಯಾರು? ಇವರು ಬ್ರಹ್ಮಾರವರ ಮಗಳೆಂದು ವಿವೇಕವು ಹೇಳುತ್ತದೆ ಅಂದಮೇಲೆ ರಚನೆಯನ್ನು ಹೇಗೆ ರಚಿಸಿದರು? ತಂದೆಯು ಬ್ರಹ್ಮಾರವರ ಮುಖಾಂತರ ರಚಿಸಿದರೆಂದರೆ ಈ ಬ್ರಹ್ಮಾ ದೊಡ್ಡ ತಾಯಿಯಾದರು. ನಂತರ ಸಂಭಾಲನೆಗಾಗಿ ಮಮ್ಮಾರವರೂ ಇದ್ದಾರೆ, ಬಾಬಾರವರೂ ಇದ್ದಾರೆ. ಮೊದಲ ನಂಬರಿನಲ್ಲಿ ಸರಸ್ವತಿಯು ಹೋಗುತ್ತಾರೆ. ಅಂದಾಗ ಜಗದಂಬಾನ ಮಹಿಮೆಯು ಎಷ್ಟಿದೆ! ಈಗ ನೀವು ತಿಳಿದಿದ್ದೀರಿ- ನಾವೇ ಬ್ರಾಹ್ಮಣರಾಗಿದ್ದೇವೆ. ಈಶ್ವರನ ಮಡಿಲಿನಲ್ಲಿ ಬಂದಿದ್ದೇವೆ. ಇಲ್ಲಿಯೂ ಸಹ ಎರಡು ಪ್ರಕಾರದವರಿದ್ದಾರೆ- ಸ್ವಂತಮಕ್ಕಳು ಮತ್ತು ಮಲತಾಯಿ ಮಕ್ಕಳು. ಒಬ್ಬರೇ ತಾಯಿಯ ಮಕ್ಕಳು ಸ್ವಂತಮಕ್ಕಳು ಮತ್ತು ಮಲತಾಯಿ ಮಕ್ಕಳೆನ್ನುವ ಪ್ರಶ್ನೆಯೇ ಏಳುವುದಿಲ್ಲ ಅಂದಾಗ ಸ್ವಂತ ಮತ್ತು ಮಲತಾಯಿ ಮಕ್ಕಳೆಂದು ಏಕೆ ಹೇಳಲಾಗುತ್ತದೆ? ಸ್ವಂತಮಕ್ಕಳು ಪ್ರತಿಜ್ಞೆ ಮಾಡುತ್ತಾರೆ- ನಾವು ಪವಿತ್ರರಾಗಿ ಆಸ್ತಿಯನ್ನು ಪಡೆಯುತ್ತೇವೆ ಅಂದರೆ ಇಂತಹ ಪವಿತ್ರರೇ ಸಿಂಹಾಸನಾಧಿಕಾರಿಗಳು, ವಾರಸುಧಾರರಾಗುತ್ತಾರೆ. ಮಲತಾಯಿ ಮಕ್ಕಳು ಪ್ರಜೆಗಳಲ್ಲಿ ಹೋಗಿಬಿಡುತ್ತಾರೆ. ಅನೇಕರು ಸ್ವಂತಮಕ್ಕಳಾಗುತ್ತಾರೆ ಮತ್ತು ಅದರಲ್ಲಿಯೂ ನಂಬರ್ವಾರ್ ಇರುತ್ತಾರೆ. ಯಾರೆಷ್ಟು ಪುರುಷಾರ್ಥ ಮಾಡುತ್ತಾರೆ ಅಂತಹವರು ತಂದೆ-ತಾಯಿಯ ಸಿಂಹಾಸನದ ಮೇಲೆ ಕುಳಿತುಕೊಳ್ಳುತ್ತಾರೆ. ಮಮ್ಮಾ-ಬಾಬಾ ಸಿಂಹಾಸನದ ಮೇಲೆ ಕುಳಿತುಕೊಳ್ಳುತ್ತಾರೆಂದರೆ ನಮಗೂ ಸಹ ಸಿಂಹಾಸನ ಬೇಕು ಆದರೆ ನಂಬರ್ವಾರ್ ಆಗಿ ಸಿಗುತ್ತದೆ. ಅಂದಾಗ ಇದು ಯೋಗದ ಯಾತ್ರೆಯಾಗಿದೆ. ತಂದೆಯನ್ನು ನೆನಪು ಮಾಡಬೇಕು, ಸ್ವದರ್ಶನ ಚಕ್ರವನ್ನು ತಿರುಗಿಸಬೇಕು, ತಮ್ಮ ಸಮಾನ ಮಾಡಿಕೊಳ್ಳಬೇಕಾಗಿದೆ. ತಮ್ಮ ಸಮಾನ ಮಾಡಿಕೊಳ್ಳುವುದರಲ್ಲಿ ಪರಿಶ್ರಮಬೇಕಾಗುತ್ತದೆ. ಮಕ್ಕಳು ಪರಿಚಯವನ್ನು ಕೊಟ್ಟು ತಂದೆಯ ಬಳಿ ರಿಫ್ರೆಷ್ ಆಗಲು ಕರೆದುಕೊಂಡು ಬರುತ್ತಾರೆ ಮತ್ತು ತಂದೆಯು ನೋಡುತ್ತಾರೆ- ಯಾರ್ಯಾರು ತಂದೆಯಿಂದ ಆಸ್ತಿಯನ್ನು ಪಡೆಯುತ್ತಾರೆ ಮತ್ತು ಎಲ್ಲಾ ಕಡೆಯಿಂದ ಮಮತ್ವವನ್ನು ತೆಗೆದು ಮತ್ತೆ ಒಬ್ಬರೊಂದಿಗೆ ಮಮತ್ವವನ್ನಿಡುತ್ತಾರೆ. ಮಕ್ಕಳಿಗೆ ಗೊತ್ತಿದೆ- ತಂದೆಯು ನಮ್ಮನ್ನು ವಿಶ್ವದ ಮಾಲೀಕರನ್ನಾಗಿ ಮಾಡುವವರಾಗಿದ್ದಾರೆ. ಮತ್ತು ತಂದೆಯೂ ಸಹ ತಿಳಿಸುತ್ತಾರೆ- ಮಕ್ಕಳೇ, ನಿಮ್ಮನ್ನು ಸ್ವರ್ಗದ ಮಾಲೀಕರನ್ನಾಗಿ ಮಾಡುತ್ತೇನೆ. ಮಕ್ಕಳೇ ನೀವು ಸೂರ್ಯವಂಶಿಯಾದರೂ ಆಗಿ, ಚಂದ್ರವಂಶಿಯಾದರೂ ಆಗಿರಿ.

ಅಂದಮೇಲೆ ತಂದೆಯು ತನಗೆ ತಾನೇ ಎಲ್ಲವನ್ನೂ ಮಾಡುತ್ತಿದ್ದಾರೆ. ನಂತರ ಮರೆಯಾಗಿಬಿಡುತ್ತಾರೆ. ಗಳಿಗೆ-ಗಳಿಗೆಯೂ ಅವತಾರವಂತೂ ತೆಗೆದುಕೊಳ್ಳುವುದಿಲ್ಲ. ಅವರಿಗೆ ತನ್ನ ಶರೀರವೇ ಇಲ್ಲ. ಅವರು ಒಂದುಬಾರಿ ಬರುತ್ತಾರೆ. ನೀವಂತೂ ಗಳಿಗೆ-ಗಳಿಗೆಯೂ ಒಂದನ್ನು ಬಿಟ್ಟು ಇನ್ನೊಂದನ್ನು ತೆಗೆದುಕೊಳ್ಳುತ್ತೀರಿ ಆದರೆ ನಾನು ಪುನರ್ಜನ್ಮದಲ್ಲಿ ಬರುವುದಿಲ್ಲವೆಂದು ತಂದೆಯು ಎಷ್ಟೊಂದು ಚೆನ್ನಾಗಿ ತಿಳಿಸುತ್ತಾರೆ. ಈ ಮಾತುಗಳು ಮೊದಲು ನಮ್ಮ ಬುದ್ಧಿಯಲ್ಲಿರಲಿಲ್ಲ. ಅನಾಯಾಸವಾಗಿ ಮನೆಯಲ್ಲಿ ಕುಳಿತಿದ್ದಂತೆಯೇ ಮಾರ್ಗದಲ್ಲಿ ಹೋಗುತ್ತಾ ತಂದೆಯು ಪ್ರವೇಶ ಮಾಡಿಬಿಟ್ಟರು ನಂತರ ಎಲ್ಲವೂ ತಿಳಿದಿರಿ. ಈಗ ದಿನ-ಪ್ರತಿದಿನ ಎಲ್ಲಾ ಮಾತುಗಳು ಬುದ್ಧಿಯಲ್ಲಿ ಕುಳಿತುಕೊಳ್ಳುತ್ತಾ ಹೋಗುತ್ತದೆ. ಹೇಳುತ್ತಾರಲ್ಲವೆ- ನಾನು 7 ದಿನಗಳ ಮಗುವಾಗಿದ್ದೇನೆ, 2 ತಿಂಗಳಿನ ಮಗುವಾಗಿದ್ದೇನೆ. ಈ ಜ್ಞಾನವಂತೂ ಸೆಕೆಂಡಿನಲ್ಲಿಯೂ ಸಿಗುತ್ತದೆ, ಎಷ್ಟೊಂದು ಮಕ್ಕಳಿದ್ದೀರಿ! ಮತ್ಯಾವುದೇ ಸತ್ಸಂಗದಲ್ಲಿ ಇಷ್ಟೊಂದು ಮಕ್ಕಳಿರಲು ಸಾಧ್ಯವಿಲ್ಲ. ಪ್ರಜಾಪಿತಬ್ರಹ್ಮಾ ಮತ್ತು ಜಗದಂಬಾರವರೂ ಸಹ ತಂದೆಯ ಮಗ ಮತ್ತು ಮಗಳಾಗಿದ್ದಾರೆ, ಸ್ತ್ರೀ-ಪುರುಷರಲ್ಲ. ಸ್ತ್ರೀ-ಪುರುಷ ಇಷ್ಟೊಂದು ಮಕ್ಕಳಿಗೆ ಜನ್ಮ ಕೊಡಲು ಹೇಗೆ ಸಾಧ್ಯ! ಕುಖವಂಶಾವಳಿಯ ಮಾತಂತೂ ಇಲ್ಲವೇ ಇಲ್ಲ. ಯಾರು ಕಲ್ಪದ ಹಿಂದೆ ಮಾತಾಪಿತರಿಂದ ಆಸ್ತಿಯನ್ನು ಪಡೆದಿದ್ದರೋ ಅವರೇ ಬರುತ್ತಿರುತ್ತಾರೆ. ಸಸಿಯು ನಾಟಿಯಾಗುತ್ತಾ ಇರುತ್ತದೆ. ಇದು ಉದ್ಯಾನವನವಾಗಿದೆಯಲ್ಲವೆ. ಈಗ ದೇವಿ-ದೇವತಾ ಧರ್ಮದ ಹೂಗಳಂತೂ ಇಲ್ಲ. ಎಲ್ಲರೂ ಹೇಗೆ ಮುಳ್ಳುಗಳಾಗಿದ್ದಾರೆ, ಚುಚ್ಚುತ್ತಿರುತ್ತಾರೆ. ಇದು ಮುಳ್ಳುಗಳ ಪ್ರಪಂಚವಾಗಿದೆ. ತಂದೆಯು ಬಂದು ಮುಳ್ಳುಗಳಿಂದ ಮೊಗ್ಗು, ಮೊಗ್ಗಿನಿಂದ ಹೂಗಳನ್ನಾಗಿ ಮಾಡುತ್ತಾರೆ. ಶ್ರೀಮತದಂತೆ ನಡೆಯಲಿಲ್ಲವೆಂದರೆ ಬಿದ್ದುಹೋಗುತ್ತಾರೆ. ಇವರು ವಿಕಾರಗಳಲ್ಲಿ ಬಿದ್ದುಬಿಟ್ಟರೆಂದು ತಿಳಿದುಕೊಳ್ಳುತ್ತಾರೆ. ಈಗ ನೀವು ಪತಿತರಿಂದ ಪಾವನರಾಗುತ್ತಿದ್ದೀರಿ. ಗಾಂಧೀಜಿಯೂ ಸಹ ಪತಿತ-ಪಾವನನನ್ನು ನೆನಪು ಮಾಡುತ್ತಿದ್ದರು. ಏಕಚಕ್ರಾಧಿಪತ್ಯದ ರಾಜ್ಯವಿರಬೇಕೆಂದು ಬಯಸುತ್ತಿದ್ದರು. ಅಂದಾಗ ಅದನ್ನು ತಂದೆಯೇ ಸ್ಥಾಪನೆ ಮಾಡುತ್ತಾರೆ. ನಿಮಗೆ ಗೊತ್ತಿದೆ- ಈಗ ನಾವು ಈ ಕಂಸಪುರಿಯಿಂದ ಕೃಷ್ಣಪುರಿಯಲ್ಲಿ ಹೋಗುತ್ತೇವೆ. ಭಾರತದಲ್ಲಿ ಸತ್ಯಯುಗವಿತ್ತು. ಲಕ್ಷ್ಮೀ-ನಾರಾಯಣರ ರಾಜ್ಯವಿತ್ತು. ಇದು 5000 ವರ್ಷಗಳ ಮಾತಾಗಿದೆ. 5000 ವರ್ಷಗಳಿಗಿಂತ ಹಳೆಯ ವಸ್ತುವಂತೂ ಯಾವುದೂ ಇರುವುದಿಲ್ಲ. ಲಕ್ಷಾಂತರ ವರ್ಷಗಳ ಯಾವುದೇ ವಸ್ತುಗಳಂತೂ ಇರಲು ಸಾಧ್ಯವಿಲ್ಲ. ನೋಡಿ, ನೀವು ವೃದ್ಧಮಾತೆಯರು, ದೂರ ದೂರದ ಹಳ್ಳಿಗಳಿಂದ ಮಾತಾಪಿತರವರ ಬಳಿ ಬಂದಿದ್ದೀರಿ. ಯಾರಿಂದ ಆಸ್ತಿಯು ಸಿಗುತ್ತದೆ. ತಂದೆಯೂ ಸಹ ವೃದ್ಧರನ್ನು ನೋಡಿ ಬಹಳ ಖುಷಿಯಾಗುತ್ತಾರೆ. 5000 ವರ್ಷಗಳ ಹಿಂದೆಯೂ ಸಹ ಬಂದು ಆಸ್ತಿಯನ್ನು ಪಡೆದಿದ್ದಿರಿ. ಎಲ್ಲಾ ಆಧಾರವು ಪುರುಷಾರ್ಥದ ಮೇಲಿದೆ. ನೀವು ವೃದ್ಧರು ಇಷ್ಟು ಜ್ಞಾನವನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲ. ಈ ದಾದಾರವರು ವೃದ್ಧರಾಗಿದ್ದರೂ ಸಹ ತುಂಬಾ ಚೆನ್ನಾಗಿ ಓದುತ್ತಾರೆ. ನೀವು ತಿಳಿಯುತ್ತೀರಿ- ಯುವತಿ ಸರಸ್ವತಿ ತಾಯಿಯು ಚೆನ್ನಾಗಿ ಓದುತ್ತಾರೆ. ಅರೆ! ಇವರಂತೂ (ಬ್ರಹ್ಮಾ) ಬ್ರಹ್ಮಪುತ್ರಾ ನದಿಯಾಗಿದ್ದಾರೆ. ಅಂದಾಗ ಇವರಂತೂ ಅವಶ್ಯವಾಗಿ ಹೆಚ್ಚಿಗೆ ಓದುತ್ತಾರಲ್ಲವೆ. ಈ ವೃದ್ಧನು ಎಲ್ಲರಿಗಿಂತ ತೀಕ್ಷ್ಣವಾಗಿದ್ದಾರೆ, ಸರಸ್ವತಿಯಂತೂ ಇವರ ಮಗಳಾದರು. ಇದು ವೃದ್ಧರಿಗೂ ಸಹ ಬಹಳ ಸಹಜವಾಗಿದೆ. ತಂದೆಯನ್ನು ನೆನಪು

ಮಾಡುತ್ತಾ ಇರಿ. ಓಹೋ ಶಿವಬಾಬಾ, ಬಲಿಹಾರಿಯಾಗುತ್ತೇನೆ, ಪಾರಾಗಿಬಿಡುತ್ತದೆ. ಸದಾ ನಮಗೆ ಶಿವತಂದೆಯು ತಿಳಿಸುತ್ತಾರೆಂದು ತಿಳಿಯಿರಿ, ಇವರನ್ನು (ಬ್ರಹ್ಮಾ) ಬಿಟ್ಟುಬಿಡಿ. ನಮಗೆ ಶಿವಬಾಬಾ ತಿಳಿಸುತ್ತಾರೆಂದು ತಿಳಿಯಿರಿ ಆಗ ಬುದ್ಧಿಯು ಶಿವತಂದೆಯ ಬಳಿ ಹೋಗುವುದರಿಂದ ವಿಕರ್ಮ ವಿನಾಶವಾಗುತ್ತದೆ. ಮಮ್ಮಾರವರೂ ಸಹ ಶಿವತಂದೆಯಿಂದಲೇ ಕೇಳಿ ತಿಳಿಸುತ್ತಾರೆ. ಸದಾ ಒಬ್ಬ ಶಿವತಂದೆಯ ನೆನಪೇ ಇರಲಿ ಆಗ ವಿಕರ್ಮ ವಿನಾಶವಾಗುತ್ತಾ ಇರುತ್ತದೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಸಿಂಹಾಸನಾಧಿಕಾರಿಗಳು ಪಕ್ಕಾ ವಾರಸುಧಾರರಾಗಲು ಪವಿತ್ರತೆಯ ಪ್ರತಿಜ್ಞೆ ಮಾಡಿ ಸ್ವಂತ ಮಗುವಾಗಬೇಕಾಗಿದೆ. ಮತ್ತೆಲ್ಲಾ ಸಂಗವನ್ನು ಬಿಟ್ಟು ಒಬ್ಬರ ಸಂಗವನ್ನು ಸೇರಬೇಕಾಗಿದೆ.

2. ತಮ್ಮ ಸಮಾನ ಮಾಡಿಕೊಳ್ಳುವ ಸೇವೆ ಮಾಡಬೇಕಾಗಿದೆ. ಮುಳ್ಳಿನಿಂದ ಮೊಗ್ಗು, ಮೊಗ್ಗಿನಿಂದ ಹೂವಾಗಬೇಕು ಮತ್ತು ಅನ್ಯರನ್ನು ಮಾಡಬೇಕಾಗಿದೆ. ಹೊಸ ವೃಕ್ಷದ ಸಸಿಯನ್ನು ನೆಡಬೇಕಾಗಿದೆ.

ವರದಾನ: ಕರ್ಮಗಳ ಗುಹ್ಯಗತಿಯ ಜ್ಞಾನಿಯಾಗಿದ್ದು ಧರ್ಮರಾಜಪುರಿಯ ಶಿಕ್ಷೆಗಳಿಂದ ಪಾರಾಗುವಂತಹ ವಿಕರ್ಮಾಜೀತ ಭವ

ಶಿಕ್ಷೆಗಳ ಅನುಭವವನ್ನೇ ಧರ್ಮರಾಜಪುರಿ ಎಂದು ಹೇಳಲಾಗುತ್ತದೆ, ಉಳಿದಂತೆ ಧರ್ಮರಾಜಪುರಿಯೆನ್ನುವುದು ಮತ್ಯಾವುದೋ ಸ್ಥಾನದಲ್ಲಿಲ್ಲ, ಅಂತ್ಯದಲ್ಲಿ ತಾವು ಮಾಡಿರುವ ಪಾಪಗಳು ಯಮದೂತರ ಭಯಾನಕ ರೂಪದಲ್ಲಿ ಸನ್ಮುಖದಲ್ಲಿ ಬರುತ್ತದೆ. ಆ ಸಮಯದಲ್ಲಿ ಪಶ್ಚಾತ್ತಾಪ ಮತ್ತು ವೈರಾಗ್ಯದ ಗಳಿಗೆಗಳಿರುತ್ತದೆ, ಚಿಕ್ಕ-ಚಿಕ್ಕ ಪಾಪಗಳೂ ಸಹ ಭೂತಗಳಂತೆ ಹಿಡಿದುಕೊಳ್ಳುತ್ತದೆ. ಪಶ್ಚಾತ್ತಾಪದ ಅಯ್ಯೋ-ಅಯ್ಯೋ ಎನ್ನುವುದಾಗುತ್ತದೆ ಆದ್ದರಿಂದ ಆ ಶಿಕ್ಷೆಗಳ ಫೀಲಿಂಗ್ನಿಂದ ಪಾರಾಗಬೇಕೆಂದರೆ ಕರ್ಮಗಳ ಗುಹ್ಯಗತಿಯನ್ನು ತಿಳಿದುಕೊಂಡಿರುವವರಾಗಿದ್ದು, ಸದಾ ಶ್ರೇಷ್ಠಕರ್ಮವನ್ನು ಮಾಡಿರಿ ಮತ್ತು ವಿಕರ್ಮಾಜೀತರಾಗಿರಿ.

ಸ್ಲೋಗನ್: ಯಾರು ತನು-ಮನ-ಧನದಿಂದ ತಂದೆಯ ಮೇಲೆ ಸಂಪೂರ್ಣವಾಗಿ ಬಲಿಹಾರಿಯಾಗುತ್ತಾರೆಯೋ ಅವರೇ ಕೊರಳಿನ ಹಾರವಾಗುತ್ತಾರೆ.